ಭಾಗ ೪

ಸೆಕ್ಷನ್ 2ಸಿ (i)

**ಕೇಂದ್ರದ ಮತ್ತು ರಾಜ್ಯದ ಶಾಸನಗಳ ಮೇರೆಗೆ ರಾಜ್ಯ ಸರ್ಕಾರದವರು ಹೊರಡಿಸಿದ ಸಾಮಾನ್ಯ ಶಾಸನಬದ್ಧ ನಿಯಮಗಳು ಮತ್ತು ರಾಜ್ಯಾಂಗದ ಮೇರೆಗೆ ರಾಜ್ಯಪಾಲರು ಮಾಡಿದ ನಿಯಮಗಳು—**

ಸಮಾಜ ಕಲ್ಯಾಣ ಮತ್ತು ಕಾರ್ಮಿಕ ಸಚಿವಾಲಯ

ಅಧಿಸೂಚನೆ ಸಂ: ಸಕಇ 247 : ಎಸ್‌ಎಡಿ 90

ಬೆಂಗಳೂರು ದಿನಾಂಕ 22ನೇ ಫೆಬ್ರವರಿ 1993

ಕರ್ನಾಟಕ ಅನುಸೂಚಿತ ಜಾತಿಗಳು/ಅನುಸೂಚಿತ ಬುಡಕಟ್ಟುಗಳು ಮತ್ತು ಇತರೆ ಹಿಂದುಳಿದ ವರ್ಗಗಳ ನೇಮಕಾತಿಗಳು ಮುಂತಾದವುಗಳ ಮೀಸಲಾತಿ ಅಧಿನಿಯಮ 1990 (1991ರ ಕರ್ನಾಟಕ ಅಧಿನಿಯಮ 7)ರ ಕಲಂ 13ರ ಉಪಕಲಂ (1)ರನ್ವಯ ದತ್ತವಾದ ಅಧಿಕಾರವನ್ನು ಚಲಾಯಿಸಿ ಕರ್ನಾಟಕ ಸರ್ಕಾರವು ಈ ಕೆಳಕಂಡ ನಿಯಮಗಳನ್ನು ರಚಿಸಿದೆ. ಏನೆಂದರೆ:-

1. ಹೆಸರು ಮತ್ತು ಪ್ರಾರಂಭ : (1) ಈ ನಿಯಮಗಳನ್ನು ಕರ್ನಾಟಕ ಅನುಸೂಚಿತ ಜಾತಿಗಳು, ಅನುಸೂಚಿತ ಬುಡಕಟ್ಟುಗಳು ಮತ್ತು ಇತರೆ ಹಿಂದುಳಿದ ವರ್ಗಗಳ ನೇಮಕಾತಿಗಳು ಮುಂತಾದವುಗಳು ನಿಯಮಗಳು 1992 ಎಂದು ಕರೆಯತಕ್ಕದ್ದು.

(2) ಈ ನಿಯಮಗಳು ಅವುಗಳು ಅಧಿಕೃತವಾಗಿ ರಾಜ್ಯಪತ್ರದಲ್ಲಿ ಪ್ರಕಟವಾದ ದಿನದಿಂದ ಜಾರಿಗೆ ಬರುತ್ತವೆ.

2. ಪರಿಭಾಷೆಗಳು : (1) ಈ ನಿಯಮಗಳಲ್ಲಿ ಸಂದರ್ಭವು ಅನ್ಯಥಾ ಅಗತ್ಯ ಪಡಿಸದ ಹೊರತು,

(1) 'ಅಧಿನಿಯಮ' ಎಂದರೆ ಕರ್ನಾಟಕ ಅನುಸೂಚಿತ ಜಾತಿಗಳು/ಅನುಸೂಚಿತ ಬುಡಕಟ್ಟುಗಳು ಮತ್ತು ಇತರೆ ಹಿಂದುಳಿದ ವರ್ಗಗಳ ನೇಮಕಾತಿಗಳು ಮುಂತಾದವುಗಳ ಮೀಸಲಾತಿ ಅಧಿನಿಯಮ 1990 (1991ರ ಕರ್ನಾಟಕ ಅಧಿನಿಯಮ 7 )

(2) 'ಶೈಕ್ಷಣಿಕ ಸಂಸ್ಥೆ' ಎಂದರೆ ಸರ್ಕಾರದಿಂದ ಸ್ಥಾಪಿತವಾದ ಇಲ್ಲವೇ ನಿರ್ವಹಿಸುತ್ತಿರುವ ಇಲ್ಲವೇ ಧನಸಹಾಯ ಪಡೆಯುತ್ತಿರುವ ಶಿಕ್ಷಣ ಸಂಸ್ಥೆ.

(3) 'ಸಾರ್ವಜನಿಕ ವಲಯದ ಸಂಸ್ಥೆಗಳು' ಎಂದರೆ 'ಅಧಿನಿಯಮದಲ್ಲಿ' ಪರಿಭಾಷಿಸಲಾದ ಎಲ್ಲಾ ಸಂಸ್ಥೆಗಳು

(4) 'ಜಾತಿ ಪರಿಶೀಲನಾ ಸಮಿತಿ' ಎಂದರೆ ನಿಯಮ (4)ರನ್ವಯ ರಚಿತವಾದ ಸಮಿತಿ.

(5) 'ಜಾತಿ ಮತ್ತು ಆದಾಯ ಪರಿಶೀಲನಾ ಸಮಿತಿ' ಎಂದರೆ, ನಿಯಮ (5) ರನ್ವಯ ರಚಿಸಲಾದ ಸಮಿತಿ.

(6) 'ನಮೂನೆ' ಎಂದರೆ ಈ ನಿಯಮಗಳಿಗೆ ಸೇರಿಸಲಾದ ನಮೂನೆ,

(7) 'ತನಿಖಾಧಿಕಾರಿ' ಎಂದರೆ ಈ ಅಧಿನಿಯಮದ ಕಲಂ (7)ರ ಉಪಕಲಂ (2)ರನ್ವಯ ಸರ್ಕಾರದಿಂದ ಅಧಿಕೃತಗೊಳಿಸಲ್ಪಟ್ಟ ಅಧಿಕಾರಿ.

(8) 'ಸಿಂಧುತ್ವ ಪ್ರಮಾಣ ಪತ್ರ' ಎಂದರೆ ಜಾತಿ ಪರಿಶೀಲನಾ ಸಮಿತಿ ಅಥವಾ ಜಾತಿ ಮತ್ತು ಆದಾಯ ಪರಿಶೀಲನಾ ಸಮಿತಿಯಿಂದ ನೀಡಲ್ಪಟ್ಟ ಪ್ರಮಾಣ ಪತ್ರ.

2. ಈ ನಿಯಮಗಳಲ್ಲಿ ಬಳಸಿದ ಆದರೆ ಪರಿಭಾಷಿಸಿಲ್ಲದ ಇತರ ಪದಗಳು ಮತ್ತು ಅಭಿವ್ಯಕ್ತಿಗಳಿಗೆ ಕರ್ನಾಟಕ ಸಿವಿಲ್ ಸೇವಾ (ಸಾಮಾನ್ಯ ನೇಮಕಾತಿ ಭರ್ತಿ) 1977ರಲ್ಲಿರುವ ಅರ್ಥವೇ ಇರತಕ್ಕದ್ದು

3. ಮೀಸಲಾತಿ : ಈ ಅಧಿನಿಯಮದ ಕಲಂ (4)ರ ಉದ್ದೇಶಕ್ಕಾಗಿ ಈ ನಿಯಮಗಳು ಜಾರಿಗೆ ಬರುವ ಆ ದಿನಾಂಕದವರೆಗೂ ಮೀಸಲಾತಿಯ ಬಗ್ಗೆ ರಾಜ್ಯ ಸರ್ಕಾರದಿಂದ ನೀಡಲಾಗಿರುವ ಕಾರ್ಯ ನಿರ್ವಾಹಕ ಆದೇಶಗಳು ಈ ನಿಯಮಗಳ ಭಾಗಗಳೆಂದೇ ಪರಿಗಣಿಸತಕ್ಕದ್ದು ಮತ್ತು ರಾಜ್ಯ ಸರ್ಕಾರದಿಂದ ಮಾರ್ಪಾಡು ಮಾಡುವವರೆಗೆ ಅಥವಾ ಬದಲಾಯಿಸುವವರೆಗೆ ಜಾರಿಯಲ್ಲಿರತಕ್ಕದ್ದು.

4. <u>ಜಾತಿ ಪರಿಶೀಲನಾ ಸಮಿತಿ</u>:—ಸಮಾಜ ಕಲ್ಯಾಣ ನಿರ್ದೇಶನಾಲಯದಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಜಾತಿ ಕೋರಿಕೆ (ಕ್ಲೇಮು)ಗಳನ್ನು ಪರಿಶೀಲಿಸುವ ಸಲುವಾಗಿ ಜಂಟಿ ನಿರ್ದೇಶಕರ ದರ್ಜೆಗೆ ಕಡಿಮೆಯಲ್ಲದ ಇಬ್ಬರು ಅಧಿಕಾರಿಗಳನ್ನೊಳಗೊಂಡ "ಜಾತಿ ಪರಿಶೀಲನಾ ಸಮಿತಿ" ಎಂದು ಕರೆಯಲ್ಪಡುವ ಸಮಿತಿಯೊಂದನ್ನು ರಾಜ್ಯ ಸರ್ಕಾರವು ತನ್ನ ಅಧಿಸೂಚನೆಯನ್ನಯ ರಚಿಸತಕ್ಕದ್ದು.

5. <u>ಜಾತಿ ಮತ್ತು ಆದಾಯ ಪರಿಶೀಲನಾ ಸಮಿತಿ</u>:—ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಇಲಾಖೆಯಲ್ಲಿ ಹಿಂದುಳಿದ ಬುಡಕಟ್ಟು ಮತ್ತು ಇತರೆ ಹಿಂದುಳಿದ ವರ್ಗಗಳ ಜಾತಿ ಮತ್ತು ಆದಾಯ ಕೋರಿಕೆ (ಕ್ಲೇಮು) ಗಳನ್ನು ಪರಿಶೀಲಿಸುವ ಸಲುವಾಗಿ ಜಂಟಿ ನಿರ್ದೇಶಕರ ದರ್ಜೆಗೆ ಕಡಿಮೆ ಇಲ್ಲದ ಒಬ್ಬರ ಅಧಿಕಾರಿಯ ನೇತೃತ್ವದಲ್ಲಿ ಸಹಾಯಕ ನಿರ್ದೇಶಕರ ದರ್ಜೆಗೆ ಕಡಿಮೆ ಇಲ್ಲದ ಇಬ್ಬರು ಅಧಿಕಾರಿಗಳನ್ನೊಳಗೊಂಡ ಜಾತಿ ಮತ್ತು ಆದಾಯ ಪರಿಶೀಲನಾ ಸಮಿತಿ ಎಂದು ಕರೆಯಲ್ಪಡುವ ಸಮಿತಿಯೊಂದನ್ನು ಸರ್ಕಾರವು ತನ್ನ ಅಧಿಸೂಚನೆಯನ್ನಯ ರಚಿಸತಕ್ಕದ್ದು.

6. <u>ಸಿಂಧುತ್ವ ಪ್ರಮಾಣ ಪತ್ರಕ್ಕಾಗಿ ಅರ್ಜಿಸಲ್ಲಿಸುವುದು</u>:—ಉದ್ಯೋಗಕ್ಕಾಗಲಿ ಅಥವಾ ಪ್ರವೇಶಕ್ಕಾಗಲೀ ಮೀಸಲಾತಿ ಪಡೆಯುವ ಪ್ರತಿಯೊಬ್ಬ ವ್ಯಕ್ತಿಯೂ ನಮೂನೆ-1ರಲ್ಲಿ ನಿಗದಿಪಡಿಸಿರುವ ಅರ್ಜಿಯನ್ನು ಜಾತಿ ಅಥವಾ ಜಾತಿ ಮತ್ತು ಆದಾಯದ ಕೋರಿಕೆ (ಕ್ಲೇಮು) ಪರಿಶೀಲನೆಗಾಗಿ :

(1) ಪರಿಶಿಷ್ಟ ಜಾತಿ ಅಥವಾ ಪರಿಶಿಷ್ಟ ವರ್ಗಕ್ಕೆ ಸೇರಿದವರೆಂದು ಕೋರಿದ್ದಲ್ಲಿ ಪರಿಶೀಲನಾ ಸಮಿತಿಗೂ,

(2) ಹಿಂದುಳಿದ ಬುಡಕಟ್ಟು ಅಥವಾ ಇತರ ಹಿಂದುಳಿದವರ್ಗಗಳಿಗೆ ಸೇರಿದವರೆಂದು ಕೋರಿದ್ದಲ್ಲಿ ಜಾತಿ ಮತ್ತು ಆದಾಯ ಪರಿಶೀಲನಾ ಸಮಿತಿಗೂ ಸಲ್ಲಿಸತಕ್ಕದ್ದು.

7. <u>ಸಿಂಧುತ್ವ ಪ್ರಮಾಣ ಪತ್ರ</u>: (1) ಜಾತಿ ಪರಿಶೀಲನಾ ಸಮಿತಿ ಅಥವಾ ಜಾತಿ ಮತ್ತು ಆದಾಯ ಪರಿಶೀಲನಾ ಸಮಿತಿಯು ಅಭ್ಯರ್ಥಿಯ ಜಾತಿ ಮತ್ತು ಆದಾಯವನ್ನು ತನಗೆ ಸೂಕ್ತವೆನಿಸಿದ ರೀತಿಯಲ್ಲಿ ಪರಿಶೀಲಿಸಿ, ಅರ್ಜಿ ಹಾಕಿದ [illegible] ತಿಂಗಳೊಳಗೆ 'ಸಿಂಧುತ್ವ ಪ್ರಮಾಣಪತ್ರ'ವನ್ನು ನಮೂನೆ-1ಎ ನಲ್ಲಿ ಅಭ್ಯರ್ಥಿಗೆ ನೀಡತಕ್ಕದ್ದು.

(2) ಜಾತಿ ಪರಿಶೀಲನಾ ಸಮಿತಿಯ ಅಥವಾ ಜಾತಿ ಮತ್ತು ಆದಾಯ ಪರಿಶೀಲನಾ ಸಮಿತಿಯ ಆದೇಶದ ಮೇಲೆ ಸಮಾಜ ಕಲ್ಯಾಣ ಮತ್ತು ಕಾರ್ಮಿಕ ಇಲಾಖೆಯ ಕಾರ್ಯದರ್ಶಿಗಳಲ್ಲಿ ಅಪೀಲು ಸಲ್ಲಿಸಬಹುದು ಮತ್ತು ಅವರ ತೀರ್ಮಾನವೇ ಅಂತಿಮವಾದುದ್ದಾಗಿರುತ್ತದೆ.

8. <u>ಶೈಕ್ಷಣಿಕ ಸಂಸ್ಥೆಗಳಿಗೆ ಪ್ರವೇಶಾವಕಾಶ</u>:—ಸಿಂಧುತ್ವ ಪ್ರಮಾಣಪತ್ರ ಒದಗಿಸಿದ ಹೊರತು ಮೀಸಲಾತಿ ಸೌಲಭ್ಯವನ್ನು ಪಡೆಯುವ ಯಾವುದೇ ಅಭ್ಯರ್ಥಿಗೂ ಶೈಕ್ಷಣಿಕ ಸಂಸ್ಥೆಯಲ್ಲಿ ತಾಂತ್ರಿಕ ಅಥವಾ ವೃತ್ತಿ ಶಿಕ್ಷಣ ಕೋರ್ಸುಗಳಲ್ಲಿ ಪ್ರವೇಶಾವಕಾಶ ನೀಡತಕ್ಕದ್ದಲ್ಲ.

9. <u>ನೇಮಕಾತಿ</u>: ಸಿಂಧುತ್ವ ಪ್ರಮಾಣಪತ್ರ ಪಡೆಯದ ಯಾವುದೇ ವ್ಯಕ್ತಿಯನ್ನು ಸರ್ಕಾರದ ಸೇವೆಗಾಗಲೀ ಅಥವಾ ಹುದ್ದೆಗಾಗಲೀ ಇಲ್ಲವೇ ಸಾರ್ವಜನಿಕ ಕ್ಷೇತ್ರದ ಕಾರ್ಯ ಸಂಸ್ಥೆಗಾಗಲೀ ನೇಮಕ ಮಾಡತಕ್ಕದ್ದಲ್ಲ.

10. <u>ಅಧಿನಿಯಮದಲ್ಲಿನ ಉಪಬಂಧಗಳನ್ನು ಉಲ್ಲಂಘಿಸುವ ಕ್ರಿಯೆಯನ್ನು ಗಣನೆಗೆ ತೆಗೆದುಕೊಳ್ಳುವ ಪ್ರಾಧಿಕಾರ ಇತ್ಯಾದಿ</u>:—ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗದ ಪ್ರವೇಶಾವಕಾಶ/ನೇಮಕಾತಿ ಮೀಸಲಾತಿಗೆ ಸಂಬಂಧಿಸಿದಂತೆ ಸಮಾಜ ಕಲ್ಯಾಣ ನಿರ್ದೇಶಕರೂ, ಹಿಂದುಳಿದ ವರ್ಗಗಳ ಅಭ್ಯರ್ಥಿಗಳ ಪ್ರವೇಶಾವಕಾಶ ನೇಮಕಾತಿ ಮೀಸಲಾತಿಗೆ ಸಂಬಂಧಿಸಿದಂತೆ ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ನಿರ್ದೇಶಕರು ಯಾವುದೇ ಪ್ರವೇಶಾವಕಾಶ ಮತ್ತು ನೇಮಕಾತಿಯಲ್ಲಿ ಅಧಿನಿಯಮ ಅಥವಾ ತತ್ಸಂಬಂಧದ ನಿಯಮಗಳ ಉಪಬಂಧಗಳು ಉಲ್ಲಂಘನೆಯಾಗಿದೆಯೆಂದು ನಂಬಲು ಸಾಕಷ್ಟು ಕಾರಣಗಳಿದ್ದಲ್ಲಿ ಅಂತಹ ಪ್ರಕರಣಗಳನ್ನು ನೇಮಕಾತಿ ಪ್ರಾಧಿಕಾರಕ್ಕೆ/ಪ್ರವೇಶಾವಕಾಶ ನೀಡುವ ಪ್ರಾಧಿಕಾರಕ್ಕೆ ಉಲ್ಲೇಖಿಸುವುದು ಮತ್ತು ಆ ವರದಿಯ ಮೇಲೆ ನೇಮಕಾತಿ ಪ್ರಾಧಿಕಾರಿಗಳು/ಪ್ರವೇಶಾವಕಾಶ ಪ್ರಾಧಿಕಾರಿಗಳು ಅಧಿನಿಯಮ ಮತ್ತು ಅಧಿನಿಯಮಗಳಿಗೆ ವ್ಯತಿರಿಕ್ತವಾಗಿ ಮಾಡಲಾದ ನೇಮಕಾತಿ ಮತ್ತು ಪ್ರವೇಶಾವಕಾಶವನ್ನು ಅನೂರ್ಜಿತವೆಂದು ಘೋಷಿಸತಕ್ಕದ್ದು.

ಪರಂತು, ಇಂತಹ ಘೋಷಣೆಯ ಮತ್ತು ಸಂಬಂಧಪಟ್ಟವರಿಗೆ [illegible] ಘೋಷಿಸಬಾರದೆನ್ನುವ ಬಗ್ಗೆ ಒಂದು ಅವಕಾಶವನ್ನು ನೀಡತಕ್ಕದ್ದು.

[illegible]

11. ರಿಕ್ತಸ್ಥಾನ/ಪ್ರವೇಶ ದಾಖಲಾತಿ ವಹಿ :—(1) ನಿಯಮ (3)ರ ಮತ್ತು ಮೀಸಲಾತಿ ಸಂಬಂಧಿಸಿದಂತೆ ರಾಜ್ಯ ಸರ್ಕಾರದಿಂದ ಮಾಡಲಾದ ಕಾಲಕಾಲಕ್ಕೆ ಇಂತಹ ಇತರೇ ಕಾರ್ಯನಿರ್ವಾಹಕ ಆದೇಶಗಳಿಗೊಳಪಟ್ಟು

(1) ರಾಜ್ಯದ ಯಾವುದೇ ನಾಗರೀಕ ಸೇವಾ ಅಥವಾ ಹುದ್ದೆ ಇಲ್ಲವೇ ಸರ್ಕಾರೀ ವಲಯದ ಸಂಸ್ಥೆಗಳ ಕಾರ್ಯಸಂಸ್ಥೆಯ ಎಲ್ಲಾ ನೇಮಕಾತಿ ಪ್ರಾಧಿಕಾರಿಗಳು ನಮೂನೆ-2 ರಲ್ಲಿ ನಂತೆ ರಿಕ್ತ ಸಾಧನದ ವಹಿಯನ್ನು ನಿರ್ವಹಿಸತಕ್ಕದ್ದು.

(2) ಎಲ್ಲಾ ಶೈಕ್ಷಣಿಕ ಸಂಸ್ಥೆಗಳು ನಮೂನೆ-3 ರಲ್ಲಿನಂತೆ ಪ್ರವೇಶ ದಾಖಲಾತಿ ವಹಿಯನ್ನು ನಿರ್ವಹಿಸತಕ್ಕದ್ದು.

12. ತಪಾಸಣೆ :—ನಿಯಮ 10ರನ್ವಯ ತನಿಖಾಧಿಕಾರಿಯು, ಸರ್ಕಾರಿ ಸೇವೆಗೆ ಅಥವಾ ಹುದ್ದೆಗೆ ಇಲ್ಲವೇ ಸಾರ್ವಜನಿಕ ಕ್ಷೇತ್ರದ ಕಾರ್ಯಸಂಸ್ಥೆಗೆ ಸಂಬಂಧಿಸಿದಂತೆ ನೇಮಕಾತಿ ಪ್ರಾಧಿಕಾರಿಯು ನಿರ್ವಹಿಸಬೇಕಾಗಿರುವ ಇಲ್ಲವೇ ಯಾವುದೇ ಕೋರ್ಸ್ ನಡೆಸುವ ಶಿಕ್ಷಣ ಸಂಸ್ಥೆ ಅಥವಾ ವಿಶ್ವವಿದ್ಯಾನಿಲಯದಲ್ಲಿನ ಪ್ರವೇಶಾವಕಾಶದ ಪ್ರಾಧಿಕಾರವು ನಿರ್ವಹಿಸಬೇಕಾದ ಯಾವುದೇ ವಹಿ ಅಥವಾ ದಾಖಲಾತಿಗಳನ್ನು ತಪಾಸಣೆ ಮಾಡಬಹುದಾಗಿದೆ.

13. ವಾರ್ಷಿಕ ವರದಿ :—(1) ಎಲ್ಲಾ ನೇಮಕಾತಿ ಪ್ರಾಧಿಕಾರಗಳೂ ಮತ್ತು ಸಾರ್ವಜನಿಕ ಕ್ಷೇತ್ರದಲ್ಲಿನ ಎಲ್ಲಾ ಕಾರ್ಯಸಂಸ್ಥೆಗಳೂ ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗಗಳ ನೇಮಕಾತಿಗೆ ಸಂಬಂಧಿಸಿದಂತೆ ವಾರ್ಷಿಕ ವರದಿಯನ್ನು ನಮೂನೆ-4ರಲ್ಲಿ ರಾಜ್ಯ ಸರ್ಕಾರದ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆಗಳ ಇಲಾಖೆ ಮತ್ತು ಸಮಾಜ ಕಲ್ಯಾಣ ಇಲಾಖೆಗೂ, ಹಿಂದುಳಿದ ಬುಡಕಟ್ಟು ಮತ್ತು ಇತರೆ ಹಿಂದುಳಿದ ವರ್ಗಗಳಿಗೆ ಸಂಬಂಧಿಸಿದಂತೆ ನಮೂನೆ-5ರಲ್ಲಿ ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಇಲಾಖಾ ನಿರ್ದೇಶನಾಲಯ ಮತ್ತು ಸಮಾಜ ಕಲ್ಯಾಣ ಇಲಾಖೆಗೂ ಪ್ರತಿ ವರ್ಷ ಮೇ ಮಾಹೆಯ 1ನೇ ತಾರೀಖಿನೊಳಗೆ ಸಲ್ಲಿಸತಕ್ಕದ್ದು.

(2) ಎಲ್ಲಾ ಶೈಕ್ಷಣಿಕ ಸಂಸ್ಥೆಗಳೂ ವಾರ್ಷಿಕ ವರದಿಯನ್ನು, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ವಿದ್ಯಾರ್ಥಿಗಳಿಗೆ ಸಂಬಂಧಿಸಿದಂತೆ ಸಮಾಜ ಕಲ್ಯಾಣ ನಿರ್ದೇಶಕರಿಗೂ, ಇತರೆ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ ಸಂಬಂಧಿಸಿದಂತೆ ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ನಿರ್ದೇಶಕರಿಗೂ ಕ್ರಮವಾಗಿ ನಮೂನೆ-6 ಮತ್ತು ನಮೂನೆ-7ರಲ್ಲಿ ಪ್ರತಿ ವರ್ಷ ಸೆಪ್ಟೆಂಬರ್ ಮಾಹೆ 1ನೇ ತಾರೀಖಿನೊಳಗೆ ಸಲ್ಲಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಗೋನಾಳ್ ಭೀಮಪ್ಪ,

ಸರ್ಕಾರದ ಉಪ ಕಾರ್ಯದರ್ಶಿ

ಸಮಾಜ ಕಲ್ಯಾಣ ಮತ್ತು ಕಾರ್ಮಿಕ ಇಲಾಖೆ.

ರ—ಜಿ. ಎಸ್. ಆರ್. ರಳ

## ನಮೂನೆ-1

## (ಸಿಂಧುತ್ವ ಪ್ರಮಾಣ ಪತ್ರ ಪಡೆಯಲು ಅರ್ಜಿ)

1. ಅಭ್ಯರ್ಥಿಯ ಹೆಸರು ಮತ್ತು ವಿಳಾಸ :
   (ಎ) ಈಗಿನ ವಿಳಾಸ
   (ಬಿ) ಖಾಯಂ ವಿಳಾಸ ..
2. ತಂದೆಯ/ತಾಯಿ/ಪೋಷಕ/ಗಂಡನ ಹೆಸರು
3. ಹುಟ್ಟಿದ ದಿನಾಂಕ ..
4. ಕುಟುಂಬದ ವಾರ್ಷಿಕ ಆದಾಯ ಮತ್ತು ಆದಾಯದ ಮೂಲಗಳು : ಒಟ್ಟು ರೂ.
   (ಎ) ಕೃಷಿ ..
   (ಬಿ) ವ್ಯಾಪಾರ ..
   (ಸಿ) ಸೇವೆ ..
      (ಅ) ಸರ್ಕಾರಿ ..
      (ಆ) ಅರೆ ಸರ್ಕಾರಿ ..
      (ಇ) ಖಾಸಗಿ ..
   (ಡಿ) ಇತರೆ ಮೂಲಗಳು ..
5. ಆಸ್ತಿಯ ವಿವರಗಳು ..
6. ಶಾಲೆಯ ದಾಖಲೆಗಳಲ್ಲಿ ತಿಳಿಸಿರುವಂತೆ ಜಾತಿ :
   (ಎ) ಪ್ರಾಥಮಿಕ ಶಾಲೆ ..
   (ಬಿ) ಮಾಧ್ಯಮಿಕ ಶಾಲೆ ..
   (ಸಿ) ಪ್ರೌಢಶಾಲೆ ..
   (ಡಿ) ಕಾಲೇಜು/ವಿಶ್ವವಿದ್ಯಾನಿಲಯ ..
7. ವಿದ್ಯಾರ್ಹತೆಗಳು :
   (ಎ) ಸಾಮಾನ್ಯ ವಿದ್ಯಾರ್ಹತೆ ..
   (ಬಿ) ತಾಂತ್ರಿಕ ವಿದ್ಯಾರ್ಹತೆ ..
8. ಶಾಲಾ/ಕಾಲೇಜುಗಳಲ್ಲಿ ವಿದ್ಯಾಭ್ಯಾಸದ ವಿವರಗಳು :

| | | ವಿದ್ಯಾಸಂಸ್ಥೆಯ ಹೆಸರು | ವಿದ್ಯಾಭ್ಯಾಸದ ವರ್ಷ |
|---|---|---|---|
| (ಎ) ಪ್ರಾಥಮಿಕ ಶಾಲೆ | .. | | |
| (ಬಿ) ಮಾಧ್ಯಮಿಕ ಶಾಲೆ | .. | | |
| (ಸಿ) ಪ್ರೌಢಶಾಲೆ | .. | | |
| (ಡಿ) ಕಾಲೇಜು | | | |

9. ಅಭ್ಯರ್ಥಿಯು ಈಗಾಗಲೇ ಪರಿಶೀಲನಾ ಪತ್ರ ಪಡೆದಿರುವನೆ ? –
   (ಹೌದಾಗಿದ್ದಲ್ಲಿ ಅದರ ಸಂಖ್ಯೆ ಮತ್ತು ದಿನಾಂಕ ನಮೂದಿಸುವುದು).
   (ಪ್ರತಿಯನ್ನು ಲಗತ್ತಿಸುವುದು).
10. ಅಭ್ಯರ್ಥಿಯು ತಿಳಿಸಲು ಬಯಸುವ ಇತರ ವಿಷಯಗಳು.

ಸ್ಥಳ :

ದಿನಾಂಕ :

ಅಭ್ಯರ್ಥಿಯ ಸಹಿ

## ಪ್ರಮಾಣ ಪತ್ರ

ಕರ್ನಾಟಕ ಅನುಸೂಚಿತ ಜಾತಿಗಳು/ಅನುಸೂಚಿತ ಪಂಗಡಗಳು ಮತ್ತು ಇತರ ಹಿಂದುಳಿದ ವರ್ಗಗಳ (ನೇಮಕಾತಿಗಳಲ್ಲಿ ಮೀಸಲಾತಿ ಇತ್ಯಾದಿ) ಅಧಿನಿಯಮ 1990ರ ಉಪಬಂಧಗಳನ್ನು ತಿಳಿದಿರುತ್ತೇವೆ ಮತ್ತು ಮೇಲೆ ತಿಳಿಸಿದ ವಿಷಯಗಳು ನನಗೆ ತಿಳಿದಿರುವಂತೆ ಸತ್ಯವಾಗಿವೆ ಮತ್ತು ಮೇಲೆ ತಿಳಿಸಿದ ವಿಷಯಗಳು ಸತ್ಯವಲ್ಲವೆಂದು ಸಾಬೀತಾದಲ್ಲಿ ನಾನು ಕ್ರಿಮಿನಲ್ ವಿಚಾರಣೆಗೆ ಒಳಪಡುತ್ತೇವೆಂದು ಘೋಷಿಸುತ್ತೇವೆ.

ಸ್ಥಳ :

ಅಭ್ಯರ್ಥಿಯ ತಂದೆ/ತಾಯಿ/ಪೋಷಕರ ಸಹಿ

ಅಭ್ಯರ್ಥಿಯ ಸಹಿ

ದಿನಾಂಕ :

### ನಮೂನೆ–ಇ

### "ಸಿಂಧುತ್ವ ಪ್ರಮಾಣ ಪತ್ರ"

ಸಮಾಜ ಕಲ್ಯಾಣ/ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ನಿರ್ದೇಶನಾಲಯಗಳ ಜಾತಿ ಪರಿಶೋಧನಾ ಸಮಿತಿ/ಜಾತಿ ಮತ್ತು ಆದಾಯ ಪರಿಶೋಧನಾ ಸಮಿತಿ.

ಸಮಿತಿಯ ತೀರ್ಮಾನ ಸಂಖ್ಯೆ : ದಿನಾಂಕ :

ಶ್ರೀ/ಶ್ರೀಮತಿ/ಕುಮಾರಿ ....................................................

ದಿನಾಂಕ .............................. ರವರ ಅರ್ಜಿಯನ್ನು ದಾಖಲಾತಿಗಳೊಡನೆ ಸಮಿತಿಯು ಪಡೆದಿದ್ದು ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗ/ಹಿಂದುಳಿದವರ್ಗಗಳಿಗೆ ಮೀಸಲಾತಿ ಸೌಲಭ್ಯ ಪಡೆಯುವ ಬಗ್ಗೆ ಎಲ್ಲಾ ಅಂಶಗಳನ್ನು ವಿವರಗಳನ್ನು ಪರಿಶೀಲಿಸಿತು.

ಕರ್ನಾಟಕ ಅನುಸೂಚಿತ ಜಾತಿಗಳು/ಅನುಸೂಚಿತ ಬುಡಕಟ್ಟುಗಳು ಮತ್ತು ಇತರೆ ಹಿಂದುಳಿದ ವರ್ಗಗಳ ನೇಮಕಾತಿಗಳ ಮುಂತಾದವುಗಳ ಕುರಿತ 1990ನೇ ಅಧಿನಿಯಮದಲ್ಲಿ ಉಪಬಂಧಗಳನ್ವಯ ಪ್ರದತ್ತವಾಗಿರುವ ಅಧಿಕಾರವನ್ನು ಚಲಾಯಿಸಿ ಸಮಿತಿಯು ಸದರಿ ಸೌಲಭ್ಯದ ಬಗ್ಗೆ ಸಮಿತಿ ಮುಂದೆ ಒದಗಿಸಿದ ದಾಖಲಾತಿಗಳನ್ನು ಪರಿಶೋಧಿಸಿ ಮತ್ತು ಸೂಕ್ಷ್ಮವಾಗಿ ಪರಿಶೀಲಿಸಿ ಹಕ್ಕಿನ ಬಗ್ಗೆ ಖಾತ್ರಿ ಪಡಿಸಿ ಕೊಂಡಿರುತ್ತದೆ.

ಆದ್ದರಿಂದ ಶ್ರೀ/ಶ್ರೀಮತಿ/ಕುಮಾರಿ ....................................................

.................................................................................. ರವರು

.................................................................................. ಜಾತಿ/ವರ್ಗಕ್ಕೆ (ಇಲ್ಲಿ ಜಾತಿಯನ್ನು ನಮೂದಿಸತಕ್ಕದ್ದು) ಸೇರಿರುವುದು ಸಿಂಧುವಾಗಿದೆ ಎಂದು ಸಮಿತಿಯು ಈ ಮೂಲಕ ಪ್ರಮಾಣೀಕರಿಸುತ್ತದೆ.

..............................

ಅಧ್ಯಕ್ಷರು,

ಜಾತಿ ಮತ್ತು ಆದಾಯ ಪರಿಶೀಲನಾ ಸಮಿತಿ.

ಮೂನೆ]-72

| ಹುದ್ದೆಯ ಹೆಸರು ಮತ್ತು ಮಂಜೂರಾದ ಹುದ್ದೆಗಳ ಸಂಖ್ಯೆ | ವೇತನ ಶ್ರೇಣಿ ಸಂಖ್ಯೆ | ನೇಮಕಾತಿ ಪ್ರಾಧಿಕಾರಿಯ ಹೆಸರು | ಈಗಾಗಲೇ ಭರ್ತಿ ಮಾಡಿರುವ ವರ್ಗವಾರು ಹುದ್ದೆಗಳ ವಿವರ | ಭರ್ತಿ ಮಾಡಬೇಕಾಗಿರುವ ಖಾಲಿ ಹುದ್ದೆಗಳು | ನೇಮಕಾತಿ ವಿಧಾ…<br>ನೇರ ನೇಮಕಾ…<br>ಮುಂಬಡ್ತಿ ನಿಯೋ… |
|---|---|---|---|---|---|
| 1 | 2 | 3 | 4 | 5 | 6 |

| ರಿಕ್ತ ಸ್ಥಾನದ ಕ್ರಮ ಸಂಖ್ಯೆ | ಹುದ್ದೆ ಖಾಲಿ ಬಿದ್ದ ದಿನಾಂಕ | ನೇಮಕಾತಿ ವಿಧಾನ ನೇರ ನೇಮಕಾತಿ/ ನಿಯೋಜನೆ | ನೇರ ನೇಮಕಾತಿಯಲ್ಲಿ ಮೀಸಲಾತಿ/ ಮೀಸಲಾತಿಯಲ್ಲಿಲ್ಲದರಲ್ಲಿ ರಿಕ್ತ ಸ್ಥಾನಗಳು ಪ.ಜಾ./ಪ.ವ./ ಎ. ಬಿ. ಸಿ. ಡಿ. ಇ | ಆಯ್ಕೆ ಪ್ರಾಧಿಕಾರಕ್ಕೆ ರಿಕ್ತ ಸ್ಥಾನಗಳನ್ನು ತಿಳಿಸಿದ ದಿನಾಂಕ | ಖಾಲಿ ಹುದ್ದೆಗಳಿಗೆ ಆಯ್… ಮೀಸಲಾತಿ ಮತ್ತು ಮೀಸಲಾತಿ ಅಲ್ಲದ್ದು |
|---|---|---|---|---|---|
| 1 | 2 | 3 | 4 | 5 | 6 |

| ನೇಮಕ ಮಾಡಿಕೊಂಡ ದಿನಾಂಕ | ನೇಮಕಾತಿ ಆದೇಶದ ಸಂಖ್ಯೆ ಮತ್ತು ದಿನಾಂಕ | ನೇಮಕಾತಿ ವಿಧಾನ ನೇರ ನೇಮಕಾತಿ ನಿಯೋಜನೆ | ಅಭ್ಯರ್ಥಿಯ ಹೆಸರು ಮತ್ತು ನೇಮಕಾತಿ ಆದೇಶದಲ್ಲಿ ಅಭ್ಯರ್ಥಿಯ ಕ್ರ. ಸಂ. | ಹುದ್ದೆಗೆ ನೇಮಕ ಮಾಡಿ ಕೊಂಡ ಅಭ್ಯರ್ಥಿ<br>ಪ. ಜಾ./ಪ. ಪ.<br>ಎ, ಬಿ, ಸಿ, ಡಿ. ಇ | ಮೀಸಲಾತಿಯಲ್ಲಿ ಯಾವ… ರೀತಿಯ ವಿಚಲನೆಯಾಗಿದ… ಸಕಾರಣಗಳು |
|---|---|---|---|---|---|
| 7 | 8 | 9 | [illegible] | 11 | 12 |

ನಮೂನೆ – 3

ವೃತ್ತಿಪರ/ಶೈಕ್ಷಣಿಕ ಅಧ್ಯಯನ ತರಗತಿಗಳಿಗೆ ಪರಿಶಿಷ್ಟ ಜಾತಿಗಳು/ಪರಿಶಿಷ್ಟ ವರ್ಗಗಳು ಮತ್ತು ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ ಪ್ರವೇಶದ ವಿವರಗಳನ್ನು ನಮೂದಿಸುವ ಪಟ್ಟಿ

ವಿದ್ಯಾ ಸಂಸ್ಥೆಯ ಹೆಸರು ಮತ್ತು ವಿಳಾಸ :

| ಅಧ್ಯಯನ ತರಗತಿಯ ಹೆಸರು ಮತ್ತು ಪ್ರಾರಂಭವಾದ ವರ್ಷ | ಮಂಜೂರಾತಿಯ ಒಟ್ಟು ಸೀಟುಗಳು (ಅಧ್ಯಯನ ತರಗತಿವಾರು) ಪ.ಜಾ./ಪ.ವ. ಎ, ಬಿ, ಸಿ, ಡಿ, ಇ | ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗ ಎ, ಬಿ, ಸಿ, ಡಿ, ಇ ವರ್ಗಗಳಿಗೆ ಮೀಸಲಾದ ಬೇಕಾದ ಒಟ್ಟು ಸಂಖ್ಯೆ (ಅಧ್ಯಯನ ತರಗತಿವಾರು) ಪ್ರಚಲಿತ ಸರ್ಕಾರಿ ಆದೇಶದ ಪ್ರಕಾರ | ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗ ಎ, ಬಿ, ಸಿ, ಡಿ, ಇ ವರ್ಗಗಳಲ್ಲಿ ಪ್ರವೇಶ ಮಾಡಿಕೊಂಡ ಅಧ್ಯಯನ ತರಗತಿಗಳ ವರ್ಗವಾರು ವಿವರ | ಯಾವುದೇ ರೀತಿಯ ವಿಚಲನೆಯಾಗಿದ್ದಲ್ಲಿ ಕಾರಣಗಳು |
|---|---|---|---|---|
| 1 | 2 | 3 | 4 | 5 |

ಸಹಿ/-

# ನಮೂನೆ – 4

## (ಎ) ಪ್ರತಿ ವೃಂದದಲ್ಲಿ ಖಾಲಿ ಇರುವ ಹುದ್ದೆಗಳ ಪೂರ್ಣ ವಿವರ

| ಕ್ರ. ಸಂ. | ಹುದ್ದೆಯ ಹೆಸರು | ಮಂಜೂರಾತಿ ಸಂಖ್ಯೆ | ನೇಮಕ ಮಾಡಿಕೊಂಡ ಪ.ಜಾ./ಪ. ವರ್ಗಗಳ ಸಂಖ್ಯೆ | ಖಾಲಿ ಹುದ್ದೆಗಳ ಸಂಖ್ಯೆ | ನೇಮಕಾತಿ ವಿಧಾನ ವರ್ಷ/ದಿನಾಂಕ | ಷರಾ |
|---|---|---|---|---|---|---|
| 1 | 2 | 3 | 4 | 5 | 6 | 7 |

(ಬ) .............. ರಿಂದ .............. ವರೆಗೆ ನೇಮಕ ಮಾಡಿಕೊಂಡ ವಿವರಗಳು

| ಕ್ರ. ಸಂ. | ಹುದ್ದೆಯ ಹೆಸರು | ನೇಮಕಾತಿ ಪ್ರಾಧಿಕಾರಕ್ಕೆ ಆಯ್ಕೆ/ತಿಳಿಸಿದ ಏಜೆನ್ಸಿ/ಉ.ವಿ.ಕ.ಕ.ಲೋ.ಸೇ.ಆ. ಇತರೆ | ಖಾಲಿ ಹುದ್ದೆಯ ವರ್ಗೀಕರಣ: ಒಟ್ಟು ಹುದ್ದೆಗಳು | ಖಾಲಿ ಹುದ್ದೆಯ ವರ್ಗೀಕರಣ: ಪ.ಜಾ. | ಖಾಲಿ ಹುದ್ದೆಯ ವರ್ಗೀಕರಣ: ಪ.ವ. | ಒಟ್ಟು: ಪ.ಜಾ. | ಒಟ್ಟು: ಪ.ವ. |
|---|---|---|---|---|---|---|---|
| 1 | 2 | 3 | 4 | 5 | 6 | 7 | 8 |

| ಆಯ್ಕೆ ಮಾಡಿದ ದಿನಾಂಕ | ಆಯ್ಕೆ ಮಾಡಿದ ಅಭ್ಯರ್ಥಿಗಳ ವರ್ಗೀಕರಣ: ಪ.ಜಾ. | ಆಯ್ಕೆ ಮಾಡಿದ ಅಭ್ಯರ್ಥಿಗಳ ವರ್ಗೀಕರಣ: ಪ.ವ. | ಹಾಲಿ ಸರ್ಕಾರದ ಆದೇಶದ ಪ್ರಕಾರ ನೇಮಕ ಮಾಡಬೇಕಾಗಿರುವುದು: ಪ.ಜಾ. | ಹಾಲಿ ಸರ್ಕಾರದ ಆದೇಶದ ಪ್ರಕಾರ ನೇಮಕ ಮಾಡಬೇಕಾಗಿರುವುದು: ಪ.ವ. | ಮೀಸಲಾತಿಯಲ್ಲಿ ಕೊರತೆ ಬಿದ್ದಿರುವುದು: ಪ.ಜಾ. | ಮೀಸಲಾತಿಯಲ್ಲಿ ಕೊರತೆ ಬಿದ್ದಿರುವುದು: ಪ.ವ. | ವಿಚಲನೆಗೆ ಕಾರಣಗಳು |
|---|---|---|---|---|---|---|---|
| 9 | 10 | 11 | 12 | 13 | 14 | 15 | 16 |

ಸಹಿ/–

ನಮೂನೆ – 5

ಅ) ಪ್ರತಿ ವೃಂದದಲ್ಲಿ ಖಾಲಿ ಇರುವ ಹುದ್ದೆಗಳ ಪೂರ್ಣ ವಿವರ.

| ಕ್ರಮ ಸಂಖ್ಯೆ | ಹುದ್ದೆಯ ಹೆಸರು | ಮಂಜೂರಾತಿ ಸಂಖ್ಯೆ | ನೇಮಕಾತಿ ಮಾಡಿದ ಹಿಂದುಳಿದ ವರ್ಗಗಳ ಸಂಖ್ಯೆ | ಖಾಲಿ ಇರುವ ಹುದ್ದೆಗಳ ಸಂಖ್ಯೆ | ನೇಮಕಾತಿ ವಿಧಾನ ವರ್ಷ : ದಿನಾಂಕ | ಷರ |
|---|---|---|---|---|---|---|
| 1 | 2 | 3 | 4 | 5 | 6 | 7 |

ಆ) ........................................ ರಿಂದ ........................ ವರೆಗೆ ನೇಮಕಾತಿ ಮಾಡಿದ ಪೂರ್ಣ ವಿ

| ಕ್ರಮ ಸಂ. | ಹುದ್ದೆಯ ಹೆಸರು | ನೇಮಕಾತಿ ಪ್ರಾಧಿಕಾರಕ್ಕೆ ಆಯ್ಕೆಮಾಡಿ ತಿಳಿಸಿದ ಏಜೆನ್ಸಿ : ಉ.ವಿ.ಕ. / ಕ/ಲೋಸೇಆ ಇತರೆ. | ಒಟ್ಟು ಹುದ್ದೆಗಳು | ಖಾಲಿ ಸ್ಥಾನಗಳ ವರ್ಗೀಕರಣ ಎ. | ಬಿ. | ಸಿ. | ಡಿ. | ಇ. | ಒಟ್ಟು ಹಿಂದುಳಿದ ವರ್ಗಗಳ ಸಂಖ್ಯೆ | ಆಯ್ಕೆಗೊಂಡ ದಿನಾಂಕ |
|---|---|---|---|---|---|---|---|---|---|---|
| 1 | 2 | 3 | 4 | 5 | 6 | 7 | 8 | 9 | 10 | 11 |

| ಆಯ್ಕೆಯಾದ ಅಭ್ಯರ್ಥಿಗಳ ವರ್ಗೀಕರಣ | | | | | ಪ್ರಚಲಿತ ಸರ್ಕಾರಿ ಆದೇಶದಂತೆ ನೇಮಕಾತಿ ಮಾಡಬೇಕಾಗಿರುವುದು | | | | | ಮೀಸಲಾತಿಯಲ್ಲಿ ಕೊರತೆ ಬಿದ್ದ ಸ್ಥಾನಗಳು | | | | | ವಿಚಲನೆಗೆ ಸಕಾರಣಗಳು |
|---|---|---|---|---|---|---|---|---|---|---|---|---|---|---|---|
| ಎ | ಬಿ | ಸಿ | ಡಿ | ಇ | ಎ | ಬಿ | ಸಿ | ಡಿ | ಇ | ಎ | ಬಿ | ಸಿ | ಡಿ | ಇ | |
| 12 | 13 | 14 | 15 | 16 | 17 | 18 | 19 | 20 | 21 | 22 | 23 | 24 | 25 | 26 | 27 |

## ನಮೂನೆ – 6

### ವಾರ್ಷಿಕ ವರದಿ

(ಎ) ಪ್ರವೇಶಗಳ ಸ್ಥಾನಗಳಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳಿಗೆ ಮೀಸಲಾತಿ

| ವಿದ್ಯಾ ಸಂಸ್ಥೆಯ ಹೆಸರು ಮತ್ತು ವಿಳಾಸ | ಅಧ್ಯಯನ ತರಗತಿಯ ಹೆಸರು | ಪ್ರವೇಶ ನೀಡಬೇಕಾದ ಸ್ಥಾನಗಳ ಒಟ್ಟು ಸಂಖ್ಯೆ | ಪ್ರವೇಶ ನೀಡಬೇಕಾದ ಸ್ಥಾನಗಳ ಸಂಖ್ಯೆ (ಸರ್ಕಾರಿ ಆದೇಶದ ಪ್ರಕಾರ) | | ಭರ್ತಿ ಮಾಡಿದ ಸ್ಥಾನಗಳ ಸಂಖ್ಯೆ | | ಕೊರತೆ ಬಿದ್ದಿರುವ ಸ್ಥಾನಗಳು | | ಷರಾ |
|---|---|---|---|---|---|---|---|---|---|
| | | | ಪ.ಜಾ. | ಪ.ವ. | ಪ.ಜಾ. | ಪ.ವ. | ಪ.ಜಾ. | ಪ.ವ. | |
| 1 | 2 | 3 | 4 | 5 | 6 | 7 | 8 | 9 | 10 |

## ನಮೂನೆ – 7

(ಎ) ಪ್ರವೇಶಗಳಲ್ಲಿ ಹಿಂದುಳಿದ ವರ್ಗಗಳಿಗೆ ಮೀಸಲಾತಿ :

| ವಿದ್ಯಾ ಸಂಸ್ಥೆಯ ಹೆಸರು ಮತ್ತು ವಿಳಾಸ | ಅಧ್ಯಯನ ತರಗತಿಯ ಹೆಸರು | ಪ್ರವೇಶ ನೀಡಬೇಕಾದ ಸ್ಥಾನಗಳ ಒಟ್ಟು ಸಂಖ್ಯೆ | ಪ್ರವೇಶ ನೀಡಬೇಕಾದ (ಸರ್ಕಾರಿ ಆದೇಶದ ಪ್ರಕಾರ) ಗುಂಪು | | | | | ಭರ್ತಿ ಮಾಡಿರುವ ಸ್ಥಾನಗಳ ಸಂಖ್ಯೆ ಗುಂಪು | | | | | ಪ್ರವೇಶದಲ್ಲಿ ಕೊರತೆ ಬಿದ್ದಿರುವುದು ಗುಂಪು | | | | | ಕಾರಣಗಳು |
|---|---|---|---|---|---|---|---|---|---|---|---|---|---|---|---|---|---|---|
| | | | ಎ. | ಬಿ. | ಸಿ. | ಡಿ. | ಇ. | ಎ. | ಬಿ. | ಸಿ. | ಡಿ. | ಇ. | ಎ. | ಬಿ. | ಸಿ. | ಡಿ. | ಇ. | |
| 1 | 2 | 3 | 4 | 5 | 6 | 7 | 8 | 9 | 10 | 11 | 12 | 13 | 14 | 15 | 16 | 17 | 18 | 19 |

ಸಹಿ/-

## ನಮೂನೆ - 4

### (ಎ) ಪ್ರತಿ ವೃಂದದಲ್ಲಿ ಖಾಲಿ ಇರುವ ಹುದ್ದೆಗಳ ಪೂರ್ಣ ವಿವರ

| ಕ್ರ. ಸಂ. | ಹುದ್ದೆಯ ಹೆಸರು | ಮಂಜೂರಾತಿ ಸಂಖ್ಯೆ | ನೇಮಕ ಮಾಡಿಕೊಂಡ ಪ.ಜಾ./ಪ. ವರ್ಗಗಳ ಸಂಖ್ಯೆ | ಖಾಲಿ ಹುದ್ದೆಗಳ ಸಂಖ್ಯೆ | ನೇಮಕಾತಿ ವಿಧಾನ ವರ್ಷ/ದಿನಾಂಕ | ಷರಾ |
|---|---|---|---|---|---|---|
| 1 | 2 | 3 | 4 | 5 | 6 | 7 |

### (ಬಿ) ................ ರಿಂದ ................ ವರೆಗೆ ನೇಮಕ ಮಾಡಿಕೊಂಡ ವಿವರಗಳು

| ಕ್ರ. ಸಂ. | ಹುದ್ದೆಯ ಹೆಸರು | ನೇಮಕಾತಿ ಪ್ರಾಧಿಕಾರಕ್ಕೆ ಆಯ್ಕೆ/ಶಿಫಾರಸಿದ ಏಜೆನ್ಸಿ/ಉ.ವಿ.ಕ.ಕ.ಲೋ.ಸೇ.ಆ./ಇತರೆ | ಖಾಲಿ ಹುದ್ದೆಯ ವರ್ಗೀಕರಣ: ಒಟ್ಟು ಹುದ್ದೆಗಳು | ಪ.ಜಾ. | ಪ.ವ. | ಒಟ್ಟು: ಪ.ಜಾ. | ಪ.ವ. |
|---|---|---|---|---|---|---|---|
| 1 | 2 | 3 | 4 | 5 | 6 | 7 | 8 |

| ಆಯ್ಕೆ ಮಾಡಿದ ದಿನಾಂಕ | ಆಯ್ಕೆ ಮಾಡಿದ ಅಭ್ಯರ್ಥಿಗಳ ವರ್ಗೀಕರಣ: ಪ.ಜಾ. | ಪ.ವ. | ಹಾಲಿ ಸರ್ಕಾರದ ಆದೇಶದ ಪ್ರಕಾರ ನೇಮಕ ಮಾಡಬೇಕಾಗಿರುವುದು: ಪ.ಜಾ. | ಪ.ವ. | ಮಾಸಲಾತಿಯಲ್ಲಿ ಕೊರತೆ ಬಿದ್ದಿರುವುದು: ಪ.ಜಾ. | ಪ.ವ. | ವಿಚಲನೆಗೆ ಕಾರಣಗಳು |
|---|---|---|---|---|---|---|---|
| 9 | 10 | 11 | 12 | 13 | 14 | 15 | 16 |

ಸಹಿ/-

ನಮೂನೆ – 3

ವೃತ್ತಿಪರ/ಶೈಕ್ಷಣಿಕ ಅಧ್ಯಯನ ತರಗತಿಗಳಿಗೆ ಪರಿಶಿಷ್ಟ ಜಾತಿಗಳು/ಪರಿಶಿಷ್ಟ ವರ್ಗಗಳು ಮತ್ತು ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ ಪ್ರವೇಶದ ವಿವರಗಳನ್ನು ನಮೂದಿಸುವ ವಹಿ

ವಿದ್ಯಾ ಸಂಸ್ಥೆಯ ಹೆಸರು ಮತ್ತು ವಿಳಾಸ :

| ಅಧ್ಯಯನ ತರಗತಿಯ ಹೆಸರು ಮತ್ತು ಪ್ರಾರಂಭವಾದ ವರ್ಷ | ಮಂಜೂರಾತಿಯ ಒಟ್ಟು ಸೀಟುಗಳು (ಅಧ್ಯಯನ ತರಗತಿವಾರು) ಪ.ಜಾ./ಪ.ವ. ಎ, ಬಿ, ಸಿ, ಡಿ, ಇ | ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗ ಎ, ಬಿ, ಸಿ, ಡಿ, ಇ ವರ್ಗಗಳಿಗೆ ಮೀಸಲಾದ ಬೇಕಾದ ಒಟ್ಟು ಸಂಖ್ಯೆ (ಅಧ್ಯಯನ ತರಗತಿವಾರು) ಪ್ರಚಲಿತ ಸರ್ಕಾರಿ ಆದೇಶದ ಪ್ರಕಾರ | ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗ ಎ, ಬಿ, ಸಿ, ಡಿ, ಇ ವರ್ಗಗಳಲ್ಲಿ ಪ್ರವೇಶ ಮಾಡಿಕೊಂಡ ಅಧ್ಯಯನ ತರಗತಿಗಳ ವರ್ಗವಾರು ವಿವರ | ಯಾವುದೇ ರೀತಿಯ ವಿಚಲನೆಯಾಗಿದ್ದಲ್ಲಿ ಕಾರಣಗಳು |
|---|---|---|---|---|
| 1 | 2 | 3 | 4 | 5 |

ಸಹಿ/-